ನೀಡುವ ಈ ಬೆಲೆ ಇನ್ನೊಂದು ಮುದ್ರಣಕ್ಕೆ ಸಹಾಯಕವಾಗುತ್ತದೆ, ಮತ್ತಷ್ಟು ಓದುಗರನ್ನು ತಲುಪುತ್ತದೆ ಎಂಬ ಕಾರಣಕ್ಕಷ್ಟೇ. ಇಲ್ಲಿ ವ್ಯಾಪಾರವೆಂಬುದು ಲವಲೇಶವೂ ಇಲ್ಲ ಎಂಬುದು ಲೇಖಕರ ಅಂಬೋಣ. ಅಂದರೆ, ಗುರುಗಳ ಬಗೆಗಿನ ಈ ಪುಸ್ತಕ ಬೆಲೆಯ ಕಾರಣಕ್ಕಾಗಿ ಕೆಲವರಿಗೆ ತಲುಪದಿರುವಂತೆ ಆಗಬಾರದು ಎಂಬುದೇ ಅವರ ಸದಾಶಯ. ಅದಕ್ಕೆಂದೇ ಅದೆಷ್ಟೋ ಪ್ರತಿಗಳನ್ನು ಉಚಿತವಾಗಿಯೇ ಹಂಚಲಾಗಿದೆಯೆಂದೂ ನಾನು ಕೇಳಿದ್ದೇನೆ. ಅದೇನೇ ಇದ್ದರೂ ಇಂತಹ ಅಮೂಲ್ಯವಾದ ಪುಸ್ತಕವೊಂದನ್ನು ಹೊರತರಲು ಕಾರಣವಾಗಿರುವ ಅನಂತರಾಮು ಮತ್ತು ಪ್ರಕಾಶಕರು ಅಭಿನಂದನಾರ್ಹರೇ ಸರಿ.

ಗುರುನಾಥರ ಕೃಪೆಗೊಳಗಾಗಿ ಹೆಚ್ಚಿನ ಕಾಲ ಅವರೊಂದಿಗೆ ಇರುವ ಅವಕಾಶಭಾಗ್ಯ ಶ್ರೀಅನಂತರಾಮು ಅವರಿಗೆ ದಕ್ಕಿದ್ದು ಈ ಕೃತಿ ರಚನೆಗೆ ಅನುಕೂಲವಾಯಿತು. ಅವರು ಬರೆದಿರುವ ಈ ಕೃತಿ ನಮ್ಮನ್ನು ಗುರುಗಳ ಸಮೀಪಕ್ಕೇ ಒಯ್ಯುತ್ತದೆ ಎಂದರೆ ಅತಿಶಯೋಕ್ತಿಯಲ್ಲ. ಅನಿರೀಕ್ಷಿತವಾಗಿ ತಮಗೆ ಪರಿಚಯವಾದ ಗುರುಗಳ ಮೊದಲ ಭೇಟಿಯಲ್ಲೇ ಅವರು ತಮ್ಮನ್ನು ಸಮರ್ಪಿಸಿಕೊಂಡುಬಿಡುತ್ತಾರೆ. ಅನಂತರದ ಪ್ರತಿಯೊಂದು ಘಟನಾವಳಿಯೂ ನಮ್ಮನ್ನು ಆಶ್ಚರ್ಯ, ಅದ್ಭುತದೆಡೆಗೇ ಒಯ್ಯುತ್ತದೆ.

ಭೂತ, ವರ್ತಮಾನ, ಭವಿಷ್ಯದ ಎಲ್ಲ ಆಗುಹೋಗುಗಳ ಬಗ್ಗೆ ಅರಿವಿದ್ದ ಗುರುನಾಥರು, ತಮ್ಮನ್ನು ಮೊದಲ ಬಾರಿ ದರ್ಶಿಸಿದವರನ್ನೂ ಅಚ್ಚರಿಯ ವಿಷಯಗಳಿಂದ ಚಕಿತಗೊಳಿಸುತ್ತಿದ್ದರು. ಎಲ್ಲರಿಗೂ ಅವರ ಭೇಟಿ ಲಭ್ಯವಾಗುತ್ತಿರಲಿಲ್ಲ, ಕೆಲವೊಮ್ಮೆ ಇಂತಹವರು ನಿಮ್ಮ ದರ್ಶನಾಪೇಕ್ಷೆ ಹೊಂದಿದ್ದಾರೆ ಕರೆತರಲೇ ಎಂದು ಕೇಳಿದರೆ ಬೇಡ, ಕಾಲ ಕೂಡಿಬಂದಿಲ್ಲ ಎನ್ನುತ್ತಿದ್ದರು. ಆದರೆ ಸ್ವತಃ ಅವರು ಬಯಸಿದವರು ಮಾತ್ರ ಬಯಸಿದ ನಿರ್ದಿಷ್ಟ ಅವಧಿಯಲ್ಲೇ ಅವರನ್ನು ಭೇಟಿಯಾಗದೆ ಇರಲು ಸಾಧ್ಯವೇ ಇರಲಿಲ್ಲ. ಯಾವುದೋ ರೀತಿಯಲ್ಲಿ ತಮ್ಮ ಬಳಿಗೆ ಅವರು ಬರುವಂತೆ ಮಾಡುತ್ತಿದ್ದರು.

ಭಕ್ತರನ್ನು ಕಂಡರೆ ಅಪಾರ ಪ್ರೇಮ. ಅಷ್ಟೇಕೆ, ಹಾದಿಬೀದಿಯಲ್ಲಿನ ಪಶು, ಪಕ್ಷಿ, ಹೀನ-ದೀನ ಮಾನವ ಜೀವಿಗಳನ್ನು ಕಂಡರೂ ಅವರು ಕರಗಿ ನೀರಾಗುತ್ತಿದ್ದರು. ಆ ಸಂದರ್ಭದಲ್ಲಿ ಅವರ ಕೊಡುಗೈ ಏನನ್ನು ದಯಪಾಲಿಸುತ್ತಿತ್ತು ಎಂದು ಹೇಳಲು ಸಾಧ್ಯವಿಲ್ಲ, ಒಂದು ಊರಿನಿಂದ ಹೊರಡುವಾಗ ಯಾವಾಗಲೂ ಅವರ ವಾಹನ ಹಣ್ಣುಹಂಪಲುಗಳಿಂದ ತುಂಬಿರುತ್ತಿತ್ತು. ಮುಂದಿನ ಊರಿಗೆ ಹೋಗುವಷ್ಟರಲ್ಲಿ ಅದು ಖಾಲಿಯಾಗಿರುತ್ತಿತ್ತು. ರಸ್ತೆಯಲ್ಲಿ ಯಾರೇ ಸಿಗಲಿ ಅವರಿಗೆ ಕೈ (ಕೆಲವೊಮ್ಮೆ ಕೈಚೀಲ) ತುಂಬುವಷ್ಟು ಹಣ್ಣುಹಂಪಲು, ಇತರ ವಸ್ತುಗಳು ಲಭ್ಯವಾಗುತ್ತಿದ್ದವು. ಹೋಮ-ಹವನಕ್ಕಿಂತಲೂ ಹಸಿದ ಹೊಟ್ಟೆಗೆ ಅನ್ನ ನೀಡುವ ವ್ರತವೇ ಶ್ರೇಷ್ಠ ಎಂದು ನಂಬಿದ್ದವರು ಅವರು. ಮನೆಗೆ ಬಂದವರ ಬಗ್ಗೆ ಅವರ ಕಾಳಜಿ ಎಷ್ಟಿತ್ತೆಂದರೆ, ಊಟೋಪಚಾರದಿಂದ ಹಿಡಿದು, ಪ್ರಯಾಣದ ಆಯಾಸ ಪರಿಹಾರದವರೆಗೂ ಅವರು ನಿಗಾ ವಹಿಸುತ್ತಿದ್ದುದುಂಟು.

ಕೆಲವು ಘಟನಾವಳಿಗಳು ಪವಾಡವೆಂದೇ ಓದುಗರಿಗೆ ಅನ್ನಿಸುವುದುಂಟು. ತರ್ಕದ ಬುದ್ಧಿಯಿಂದ ಯೋಚಿಸಿದರೆ ಇದಕ್ಕೆ ಉತ್ತರ ಸಿಗಲಾರದು. ಸ್ವತಃ ಲೇಖಕರೇ ಗುರುಗಳ ಬಗ್ಗೆ ಹಾಡು ಬರೆದುಕೊಂಡು ಜೇಬಿನಲ್ಲಿ ಇಟ್ಟುಕೊಂಡಿದ್ದಾಗ, ಗುರುಗಳು ಬೇರೆ ಯಾರನ್ನೋ ನೋಡುತ್ತ ಹಾಡು ಬರೆದು ಜೇಬಿನಲ್ಲಿ ಇಟ್ಟುಕೊಂಡರೆ ನಮಗೆ ತಿಳಿಯುವುದಾದರೂ ಹೇಗೆ? ಎಂದು ಹೇಳಿದರಂತೆ. ಕೂಡಲೇ ಇವರು ಜೇಬಿನಲ್ಲಿದ್ದ ಹಾಡನ್ನು ತೆಗೆದು ಹಾಡಲು ಶುರುಮಾಡಿದರಂತೆ. ಕಂಠಪಾಠವಾಗುವ ರೀತಿ ಹತ್ತಾರು ಬಾರಿ ಅದೇ ಹಾಡನ್ನು ಗುರುಗಳು ಹಾಡಿಸಿದರಂತೆ. ಯಾರೋ ಒಬ್ಬ ಅರ್ಚಕರು ಗುರುಗಳನ್ನು ಭೇಟಿ ಮಾಡಿದಾಗ ಅವರ ಮನೆಯಲ್ಲಿ ಖಾಲಿಯಾದ ಮದ್ಯದ ಬಾಟಲಿನಲ್ಲಿ ಜೇನುತುಪ್ಪ ತುಂಬಿಟ್ಟಿರುವುದನ್ನು ಉಲ್ಲೇಖಿಸಿ ಅದರ ಹೆಸರು ಹೇಳಿ ಗಣಪತಿಗೆ ಅದನ್ನೇ ಅಭಿಷೇಕ ಮಾಡುತ್ತೀರಾ? ಎಂದು ಕೇಳಿದರಂತೆ. ಅರ್ಚಕರಿಗೆ ಅರ್ಥವಾಗದಿದ್ದಾಗ ಮನೆಗೆ ಹೋಗಿ ನೋಡು ಎಂದರಂತೆ. ಅವರು ಮನಗೆ ಬಂದು ನೋಡಿದಾಗ ಅವರಿಗೆ ಆಶ್ಚರ್ಯ! ಗುರುಗಳು ಹೇಳಿದಂತೆ ಮದ್ಯದ ಬಾಟಲಿನಲ್ಲಿ ಜೇನುತುಪ್ಪವಿದೆ. ಆಗ ಅವರು ಬೀದಿಯಲ್ಲಿ ಜೇನುತುಪ್ಪ ಮಾರುವ ವ್ಯಕ್ತಿಯೊಬ್ಬನಿಂದ ಬಾಟಲಿ ಯಾವುದೆಂದು ನೋಡದೆ ಜೇನು ಕೊಂಡಿದ್ದನ್ನು ಜ್ಞಾಪಿಸಿಕೊಂಡು ಪಶ್ಚಾತ್ತಾಪಪಟ್ಟು ಬದಲಾಯಿಸಿದರಂತೆ. ಇವೆಲ್ಲ ಹೇಗೆ ಸಾಧ್ಯ ಎಂದು ಓದುಗರಿಗೆ ಅನ್ನಿಸದೇ ಇರದು. ಆದರೆ ಅದು ತರ್ಕಕ್ಕೆ ನಿಲುಕುವ ವಿಷಯವಲ್ಲ, ಭಾವನೆಗೆ ಮತ್ತು ನಂಬಿಕೆಗೆ ತಿಳಿಯುವ ತಿಳಿವು. ಆದ್ದರಿಂದ ಅದನ್ನು ತಿಳಿಯಲು ಗುರುಗಳಿಗೇ ಶರಣುಹೋಗಬೇಕಷ್ಟೆ.

ಇಷ್ಟು ದೊಡ್ಡ ವ್ಯಕ್ತಿಗಳಾಗಿದ್ದರೂ ಗುರುನಾಥರು ಇತರರನ್ನು ಕರೆಯುತ್ತಿದ್ದ ರೀತಿ, ಮಾತನಾಡಿಸುತ್ತಿದ್ದ ಪರಿ ಆಶ್ಚರ್ಯವೇ ಸರಿ. ಸಾರ್, ಹೇಗಿದ್ದೀರಿ?, ಕೂತ್ಕೊಳ್ಳೀ ಸಾರ್, ಏನು ಸಮಾಚಾರ ಸಾರ್- ಇದು ಅವರು ಇತರರನ್ನು ಸಂಬೋಧಿಸುತ್ತಿದ್ದ ರೀತಿ! ಹಿಮಬಂಡೆ ವಜ್ರದಷ್ಟು ಕಠೋರವಾಗಿದ್ದರೂ, ನೀರಾಗಿ ಹರಿಯುವ ಸ್ವಭಾವವನ್ನೂ ಹೊಂದಿರುತ್ತದೆ ಅಲ್ಲವೇ?!

ಗುರುನಾಥರ ಅಂತಃಕರಣದ ಬಗ್ಗೆ ಬರೆಯುವಾಗ ಅನಂತರಾಮು ಅವರು ಕರಗಿ ನೀರಾಗಿದ್ದಾರೆ. ಲೇಖಕರದ್ದೇ ಅನುಭವವಿದು: ಒಮ್ಮೆ ಅವರು ಗುರುನಾಥರಿಗೆ ಹಾಲು ನೀಡಿದಾಗ ಮೊದಲು ಇವರಿಗೇ ಕುಡಿಸಿ ಉಳಿದ ಹಾಲನ್ನು ಅವರು ಕುಡಿದರಂತೆ. ಇದನ್ನು ಕೇಳಿದಾಗ ಎಂತಹ ಅಂತಃಕರಣವೂ ಕರಗಿ ನೀರಾಗದೇ ಇರದು. ಭಕ್ತಾದಿಗಳ ಮನೆಗೆ ಹೋದಾಗ ಗುರುಗಳಿಗೆ ಸಮರ್ಪಿಸಿದ ತಿಂಡಿ-ತಿನಿಸನ್ನು ಜೊತೆ ಇದ್ದವರಿಗೆ ತಾವೇ ತಮ್ಮ ಕೈಯಾರೆ ತಿನ್ನಿಸಿ ಸಂತೋಷಪಡುತ್ತಿದ್ದರು ಎಂಬುದನ್ನು ಕೇಳಿದಾಗ ಮನಸ್ಸು ತುಂಬಿಬರುತ್ತದೆ.

ಚೈತನ್ಯ ಶಾಶ್ವತವೇ ಆಗಿದ್ದರೂ ಮಾನವ ಸ್ವರೂಪಕ್ಕೆ ಒಂದು ಮಿತಿ ಇದ್ದೇ ಇದೆಯಲ್ಲವೇ. ಅದೇ ರೀತಿಯಲ್ಲಿ ಶ್ರೀಗುರುನಾಥರು ಮಾನವ ಶರೀರವನ್ನು ತ್ಯಜಿಸುವ ನಿರ್ಧಾರ ಮಾಡಿ 30 ಜುಲೈ 2010 ರಂದು ರಾತ್ರಿ ವಿಶ್ವದಲ್ಲಿ ಲೀನವಾದರು. ಆ ಕ್ಷಣದಲ್ಲಿ ಲಕ್ಷಾಂತರ ಹೃದಯಗಳು ವೇದನೆಯಿಂದ ನರಳಿದವು. ಗುರುನಾಥರ ಸಾನ್ನಿಧ್ಯದ ಆನಂದ, ಅವರ ಆತಿಥ್ಯದ ಸವಿ, ಅವರ ಕರುಣಾಮಯಿ ಮಾತುಗಳನ್ನು ಸ್ಮರಿಸಿ ಆ ಮನಸ್ಸುಗಳು ಬಿಕ್ಕಿದವು. ಆದರೆ, ಗುರುನಾಥರೇ ಅವರೆಲ್ಲರ ಮನಸ್ಸಿನಲ್ಲೂ ಆವಿರ್ಭವಿಸಿ ಸಾಂತ್ವನ ಹೇಳಿದರೆಂಬುದೇ ಎಲ್ಲರ ಅನುಭವ.

ಈ ಪುಸ್ತಕ ಅಧ್ಯಾತ್ಮದ ಬಗ್ಗೆ ಯಾವ ಅರಿವೂ ಇಲ್ಲದವರಿಗೆ ಒಂದು ಸ್ಪಷ್ಟ ನಿರ್ದೇಶನವನ್ನು ನೀಡುತ್ತದೆ ಎಂದರೆ ತಪ್ಪಾಗಲಾರದು. ಇಂತಹ ದೈವೀಪುರುಷರ ಬಗ್ಗೆ, ಅವಧೂತರ ಬಗ್ಗೆ ಇನ್ನಷ್ಟು ತಿಳಿಯುವ ಕುತೂಹಲವನ್ನು ಪುಸ್ತಕ ಮೂಡಿಸುವುದರಲ್ಲಿ ಅನುಮಾನವಿಲ್ಲ. ಗುರುನಾಥರನ್ನು ಪ್ರತ್ಯಕ್ಷ ಕಾಣದವರಿಗೆ ಅವರ ಸಮಗ್ರ ಚಿತ್ರಣವನ್ನು ಚಿತ್ತದಲ್ಲಿ ಮೂಡಿಸುವ ಹಾಗೆ ಕೃತಿಯನ್ನು ರಚಿಸಿ ಅನಂತರಾಮು ಅವರು ಭಕ್ತವೃಂದಕ್ಕೆ ಬಹುದೊಡ್ಡ ಉಪಕಾರವನ್ನೇ ಮಾಡಿದ್ದಾರೆ ಎಂದರೆ ಅತಿಶಯವಲ್ಲ. ಪುಸ್ತಕವನ್ನು ಓದಿದವರಿಗಂತೂ ಗುರುನಾಥರು ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸುವ ಭಾಗ್ಯ ಲಭಿಸುವುದು ನಿಶ್ಚಿತ.